ವಾರದ ಮುಂಗಾರು

ಭಾನುವಾರ 12 - 2 - 1989

ಎಚ್ಚರಿಕೆ!

ಮಹಾಭಾರತಕ್ಕೆ ಕಥೆ ಬರೆಯಬೇಡ

ದೂರದರ್ಶನದಲ್ಲಿ 'ಮಹಾಭಾರತ' ಧಾರಾವಾಹಿಯಾಗಿ ಲಕ್ಷಾಂತರ ಜನರ ಗಮನ ಸೆಳೆಯುತ್ತಿದೆ. ಟಿ. ವಿ. ಮಹಾಭಾರತದ ಕಥೆಗೆ ಚಿತ್ರಕಥೆ ಮತ್ತು ಸಂಭಾಷಣೆ ಬರೆದವರು ಹಿಂದಿಯ ಖ್ಯಾತ ಸಾಹಿತಿ ಡಾ|| ರಾಹಿಮಾಸೂಮ್‌ರಜಾ.

ಡಾ|| ರಾಹಿ ಮಾಸೂಮ್ ರಜಾ ಇಂದು ಹಲವಾರು ಮತಾಂಧರ ಕ್ರೋಧಕ್ಕೆ ತುತ್ತಾಗಿದ್ದಾರೆ. ಮುಸ್ಲಿಮನೊಬ್ಬ ಮಹಾಭಾರತಕ್ಕೆ ಕಥೆ, ಸಂಭಾಷಣೆ ಬರೆಯುವುದನ್ನು ಸಹಿಸಲಾಗದ ಹಲವಾರು ಮತಾಂಧರು ಅವರಿಗೆ ಜೀವ ಬೆದರಿಕೆ ಒಡ್ಡುತ್ತಿದ್ದಾರೆ! ಅಂತಹ ಎರಡು ಪತ್ರಗಳು ಇಲ್ಲಿವೆ. ಜತೆಗೆ ಆ ಪತ್ರಗಳನ್ನು ಪ್ರಸ್ತಾಪಿಸಿ ಡಾ| ರಜಾ ಅವರು 'ಗಂಗಾ' ಮಾಸಿಕ ಪತ್ರಿಕೆ ಸಲಹೆಗಾರ ಸಂಪಾದಕ, ಖ್ಯಾತ ಸಾಹಿತಿ ಕಮಲೇಶ್ವರ್‌ಗೆ ಬರೆದ ಪತ್ರದ ಅನುವಾದ ಇಲ್ಲಿದೆ.

ಡಿಯರ್ ಕಮಲೇಶ್ವರ,

ರಾಜೀವ ಗಾಂಧಿಯವರಿಗೆ ಸಲ್ಮಾನ್ ರಶ್ದಿ ಒಂದು ಬಹಿರಂಗ ಪತ್ರ ಬರೆದಿದ್ದಾರೆ. ರಾಜೀವ ಗಾಂಧಿಯವರಿಗೆ ಬಹಿರಂಗ ಪತ್ರ ಬರೆಯುವುದರಲ್ಲಿ ಯಾವ ಅರ್ಥವೂ ಇಲ್ಲ. 'ರಿಜಿಸ್ಟರ್ಡ್ ಪೋಸ್ಟ್' ಮಾಡಿದ ಕವರಿಗೆ ಉತ್ತರಿಸುವ ತೊಂದರೆಯನ್ನೇ ಅವರು ತೆಗೆದುಕೊಳ್ಳುವುದಿಲ್ಲ. ಪಾನ್ಸ್ಕಿಪಾವರ ಜಗಳದ ಸಂದರ್ಭದಲ್ಲಿ ನಾನು ಅವರಿಗೊಂದು, ರಾಷ್ಟ್ರಪತಿಯವರಿಗೊಂದು ಪತ್ರ ಬರೆದು ನೋಡಿದ್ದೇನೆ. ಈ ಮಹಾನ ಭಾವರಿಗೆ ಗಂಭೀರವಾದ ಸಮಸ್ಯೆಯ ಕುರಿತು ಯಾವ ಅಭಿರುಚಿಯೂ ಇಲ್ಲ. ಯಾವ ಸಮಸ್ಯೆಯ ಕುರಿತು ಯಾವ ಸಂದರ್ಭದಲ್ಲಿ ಮಾತಾಡಿದರೆ ತಮ್ಮ ಕುರ್ಚಿಗೆ ಲಾಭವಿದೆ ಎನ್ನುವುದನ್ನು ಕಾಯುತ್ತಿರುವವರು. ಇವರು ಹಿಂದೂಗಳ ಪರವೂ ಅಲ್ಲ, ಮುಸ್ಲಿಮರ ಪರವೂ ಅಲ್ಲ. ಹಿಂದುಸ್ತಾನಕ್ಕಾಗಿಯೂ ಎಂದೂ ಪರವಾಗಿರುವುದಿಲ್ಲ. ಮೂಡುವ ಸೂರ್ಯನಿಗೆ ಬೆನ್ನು ಹಾಕಿ ಕುಳಿತು, ಬೆಳಗಾಗದೇ ಇದ್ದರೆ ತಮಗೆ ಕ್ಷೇಮವೆಂದು ಯೋಚಿಸುವವರು.

ನಾನು ರಶ್ದಿಯವರ ಪುಸ್ತಕ ಓದಿಲ್ಲ ಹಾಗಾಗಿ ಅದರ ಬಗ್ಗೆ ಏನೂ ಹೇಳುವಂತಿಲ್ಲ. ಆದರೆ ನಾನು ಅವರ ಹಿಂದಿನ ಎರಡೂ ಪುಸ್ತಕ ಓದಿದ್ದೇನೆ. ಅವೆರಡೂ ನನಗೆ ಅತ್ಯಂತ ಕೆಟ್ಟದ್ದೆನಿಸಿತ್ತು. ಈ ಪುಸ್ತಕವೂ ಜನರು ಹೊಗಳುವಷ್ಟು ಒಳ್ಳೆಯದಿರಲಿಕ್ಕಿಲ್ಲ. ಬಹುಶಃ ಸರಕಾರಿ ವಲಯದಲ್ಲಿ ಲಂಚಕೊಟ್ಟು ಬ್ಯಾನ್ ಮಾಡಿಸಿರಬಹುದು.

'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಕುರಾನ್‌ದ ಬಗ್ಗೆ ಬರೆದ ಅರುಣಶೌರಿಯವರ ಲೇಖನವನ್ನು ಓದಿದ್ದೇನೆ. ಸರಕಾರ ಈ ಲೇಖನವನ್ನು ಅವಶ್ಯವಾಗಿ ಬ್ಯಾನ್ ಮಾಡಿ ಶೌರಿಯವರ ಮೇಲೆ ಕೇಸು ಹಾಕಬೇಕಾಗಿತ್ತು. ಹದೀಸ ಮತ್ತು ಕುರಾನದ ಮಹತ್ವದ ಅಂತರ ಗೊತ್ತಿಲ್ಲದ ವ್ಯಕ್ತಿಗೆ ಆ ವಿಷಯದ ಕುರಿತು ಪೆನ್ನು ಬಳಸುವ ಅಧಿಕಾರವೇ ಇಲ್ಲ. ಈ ಮೊದಲೂ ಅರುಣಶೌರಿಯವರು ಹಿಂದು ಮತ್ತು ಮುಸ್ಲಿಮ ಮತೀಯವಾದಿಗಳಿಗೆ ಸಹಕಾರಿಯಾಗಬಲ್ಲ ಲೇಖನವನ್ನು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬರೆದಿದ್ದಾರೆ. ಹೀಗೆಲ್ಲಾ ಆಗುತ್ತಿರುವಾಗ ಪ್ರೆಸ್ ಕೌನ್ಸಿಲ್ ಯಾರ ಉಪಕಾರಕ್ಕಾಗಿ ಇರುವುದು?

ಕನ್ನಡಾನುವಾದ
ಮಾಧವಿ ಭಂಡಾರಿ

ಈ ಪತ್ರವನ್ನು ಇಂಗ್ಲಿಷ್‌ನಲ್ಲಿ ಯಾಕೆ ಬರೆದಿದ್ದಾರೆ ಎನ್ನುವುದನ್ನು ಮೊದಲು ಹೇಳಿ. ಅಲ್ಲದೆ ಈ ಪತ್ರವನ್ನು ಇಷ್ಟು ಕೆಟ್ಟ ಇಂಗ್ಲಿಷ್‌ನಲ್ಲಿ ಯಾಕೆ ಬರೆದಿದ್ದಾರೆ? ವಿಶ್ವಹಿಂದೂ ರಕ್ಷಾ ಸಮಿತಿಯ ಸರಕಾರಿ ಭಾಷೆ ಇಂಗ್ಲಿಷೆ? ಇನ್ನುಳಿದ ಪತ್ರಗಳಂತೆ ನಾನು ಈ ಪತ್ರವನ್ನು ಕಸದ ಬುಟ್ಟಿಗೆ ಹಾಕುತ್ತಿದ್ದೆ. ಆದರೆ ಹಾಗೆ ಮಾಡದೇ ಇದ್ದುದಕ್ಕೆ ಕಾರಣವಿಷ್ಟೆ, 'ಮಹಾಭಾರತ'ವನ್ನು ಮುಸಲ್ಮಾನನು ಯಾಕೆ ಬರೆಯುತ್ತಿದ್ದಾನೆ ಎಂಬ ವಿಚಾರ ಯಾವುದೋ

Sir,

We are very much surprised to see Mahabharat a great Hindu epic on TV written by you. It is indeed an absurdity and straight insult to Hindu religion that such low quality dialougues for such great epic is written by a traitor, outsider & pro Pakistani like you. It is in your and your community interest that you should stop writing dialogues for Mahabharat and you are being Muslim and anti Hindu mind your own business and go out of India and settle in Pakistan, failing which we will take hard action against you. We will destroy you when you won't get chance to repent. Get lost from our holy country. Keep one thing in mind Muslims have no right whatsoever to stay in India.

VIJAY SAGAR MOHPATRA,
President
Vishwa Hindu Hit Raksha Samiti

ಬೆದರಿಕೆ ಪತ್ರ

C.C. to NNI
B.R. Chopra
Door Darshan

Sir,

You will publish above letter written to traitor Dr. Rahi Masoom Raza who has insulted Hindu religion by writing third grade dialogue of great epic Mahabharat which will not be tolerated under any circumstances. If you don't stop him and allow him further to write dialogue about the TV Serial Mahabharat, we will blow up Door Darshan. JAI HIND—BHARAT MATA KI JAI, HINDUSTAN ZINDABAD—VANDE MATARAM. Unless all holy Hindu sites like Ramjanmabhumi, Krishna Janmabhumi are handed over to Hindus in reasonable time it is our pledge that not a single Muslim will survive all over India.

Vijay Sagar Mohpatra,
President
Vishwa Hindu Hit Raksha Samiti, Varanasi.

ವಿಧದಲ್ಲಿ ಜನರನ್ನು ಕೆರಳಿಸುತ್ತಿರಬಹುದು. ಟಿ. ವಿ. ಸೀರಿಯಲ್ 'ಮಹಾಭಾರತ'ಕ್ಕಾಗಿ ನಾನು ಬರೆಯುತ್ತಿದ್ದೇನೆ ಎನ್ನುವುದು ಗೊತ್ತಾದ ದಿನದಿಂದ ನೇರವಾಗಿಯೋ ಸುತ್ತುಬಳಸಿಯೋ 'ಒಬ್ಬ ಮುಸಲ್ಮಾನ ಈ ಸೀರಿಯಲ್‌ಗೆ ಯಾಕೆ ಬರೆಯುತ್ತಿದ್ದಾನೆ. ಇದನ್ನು ಬರೆಯುವಾಗ ಅವನಿಗೆ ಹೇಗೆ ಅನ್ನಿಸ್ತಾ ಇದೆ' ಎಂಬಿತ್ಯಾದಿಯಾಗಿ ಕೇಳದೇ ಇದ್ದ ಪತ್ರಕರ್ತರೇ ಇಲ್ಲ.

ನನ್ನ ಪ್ರಶ್ನೆ ಇಷ್ಟೆ. 'ಮಹಾಭಾರತ' ಹಿಂದೂಗಳ ಮಹಾಕಾವ್ಯವಾದದ್ದು ಯಾವಾಗಿನಿಂದ? ಈ ಮಹಾಕಾವ್ಯ ಹಿಂದುಸ್ತಾನಿಗಳ ಸೊತ್ತು. ಆದ್ದರಿಂದ ನಾನು 'ಮಹಾಭಾರತ'ವನ್ನು ಯಾಕೆ ಬರೆಯುತ್ತಿದ್ದೇನೆ ಎಂದು ಕೇಳುವ ಅಧಿಕಾರ ಯಾವ ಹಿಂದುವಿಗೂ ಇಲ್ಲ. 'ಮಹಾಭಾರತ' ನನ್ನ ದೇಶದ ಗತಕಾಲದ ಇತಿಹಾಸ. ನಾನು ನನ್ನ ದೇಶದ ವರ್ತಮಾನ. ನನ್ನ ದೇಶದ ಭವಿಷ್ಯಕ್ಕಾಗಿ ನಾನಿದನ್ನು ಬರೆಯುತ್ತಿದ್ದೇನೆ. ಇದು ನನ್ನ ಕರ್ತವ್ಯ ಕೂಡಾ. ನಾನು ಇಂದಿನವರೆಗೆ ಹಿಂದೂಗಳಿಗೆ ಹೆದರಿಯೋ ಅಥವಾ ಹಿಂದೂಗಳನ್ನು ಖುಷಿಪಡಿಸುವುದಕ್ಕಾಗಿಯೋ ಏನನ್ನೂ ಬರೆದಿಲ್ಲ. ಇನ್ನು ಮುಂದೆ ಬರೆಯುವುದೂ ಇಲ್ಲ. ಅಂತೆಯೇ ಇಂದಿನವರೆಗೆ ಮುಸಲ್ಮಾನರಿಗೆ ಹೆದರಿಯೋ, ಮುಸಲ್ಮಾನರನ್ನು ಖುಷಿಪಡಿಸುವುದಕ್ಕಾಗಿಯೋ ಏನನ್ನೂ ಬರೆದಿಲ್ಲ, ಇನ್ನು ಮುಂದೆ ಬರೆಯುವುದೂ ಇಲ್ಲ. ಮುಸಲ್ಮಾನ ಮತ್ತು ಹಿಂದು ಮತಾಂಧರಿಗೆ ಭಾರತ ಸರಕಾರ ಹೆದರುತ್ತದೆ. ಮುಸಲ್ಮಾನ ಮತ್ತು ಹಿಂದು ಮತೀಯವಾದಿಗಳಿಗೆ ವಿ. ಪಿ. ಸಿಂಗ್ ಹೆದರುತ್ತಾರೆ. ಇದನ್ನು ಯಾಕೆ ಹೇಳಿದೆ ಎಂದರೆ, ಆರೀಫ್ ಮಹಮ್ಮದ್ ಖಾನರಿಗೆ ವಿರುದ್ಧವಾಗಿ ಅವರು ಸೈಯದ್ ಶಹಾಬುದ್ದೀನರನ್ನು ಅಲಹಾಬಾದಿಗೆ ಕರೆಸುತ್ತಿರಲಿಲ್ಲ. ನಾನು ಚಂದ್ರಶೇಖರರಂತೆ ಮುಸಲ್ಮಾನರ ಓಟಿನ ಆಸೆಯಿಂದ ಸೈಯದ್ ಶಹಾಬುದ್ದೀನ್‌ನಂಥವರನ್ನು ಸಹಿಸಿಕೊಳ್ಳಲಾರೆ. 'ಲೋಕದಳ' ಒಂದು ಸೆಕ್ಯುಲರ್ ಪಾರ್ಟಿಯಾಗಿದ್ದರೆ ಅವರು ಶಹಾಬುದ್ದೀನ್‌ನನ್ನು ಯಾಕೆ ಓಡಿಸುತ್ತಿಲ್ಲ? ಒಂದು ಕಾಲದಲ್ಲಿ ನರಸಿಂಹ ರಾವ್‌ರವರೂ ಕೂಡಾ ಮುಸ್ಲೀಂರೆಲ್ಲರೂ ಪಾಕಿಸ್ತಾನಕ್ಕೆ ಹೋಗಬೇಕೆಂದು ಅಪ್ಪಣೆ ಕೊಡಿಸಿದ್ದಾರೆ.

ಇನ್ನು ಕೆಲವೇ ದಿನಗಳಲ್ಲಿ ಹಿಂದುಸ್ತಾನಿಗಳನ್ನು ಸುರಕ್ಷಿತವಾಗಿಡುವುದಕ್ಕೆ ಒಂದು ಅಭಯವನವನ್ನು ನಿರ್ಮಿಸಬೇಕಾದೀತು. ಇಲ್ಲವಾದಲ್ಲಿ ಒಂದು ಕಾಲದಲ್ಲಿ ಈ ದೇಶದಲ್ಲಿ ತುಂಬಿಕೊಂಡಿದ್ದ ಹಿಂದುಸ್ತಾನಿಗಳು ಹೀಗಿದ್ದರು ಎಂಬುದನ್ನು ಮುಂಬರುವ ಪೀಳಿಗೆಗೆ ತೋರಿಸುವುದೂ ಕಷ್ಟವಾಗಬಹುದು.

ಯಾರ್ ಕಮಲೇಶ್ವರ, ನಿನಗೆ ನೆನಪಿರಬಹುದು, ಹಿಂದೊಮ್ಮೆ ನೀನು 'ಸಾರಿಕಾ'ದ ಸಂಪಾದಕನಾಗಿದ್ದಾಗಲೂ ನಿನಗೆ ಒಂದು ಬಹಿರಂಗ ಪತ್ರ ಬರೆಯುವ ಅನಿವಾರ್ಯತೆಬಂದಿತ್ತು. ಈ ಬಾರಿ ಮಾತ್ರ ಬರಲಾಗುವ ಗೋಜಿಗೆ ಹೋಗುವುದೇ ಇಲ್ಲ. ಬಾಳಾ ಸಾಹೇಬ ದೇವರಸ್, ಶಹಾಬುದ್ದೀನ್. ಬನಾಟ್‌ವಾಲಾ, ಬಾಳಠಾಕರೆ ಅಲ್ಲದೇ ಇಂತಹದೇ ಗಣ್ಯರು ನನಗೊಂದು ವಿಚಾರ ತಿಳಿಸಲಿ. ಹಿಂದುಸ್ತಾನಿಗಳಿಗಾಗಿ ಅಭಯವನವನ್ನು ಎಲ್ಲಿ ರಚಿಸಬೇಕು? ಧರ್ಮ, ಮತ ಇಹ-ಪರದ ರಕ್ಷಕರು ದೇಶಾದ್ಯಂತ ಇದ್ದಾರೆ. ಆದರೆ ಅಪಾಯದಲ್ಲಿರುವ ನಮ್ಮ ರಾಷ್ಟ್ರೀಯತೆಯನ್ನು ಉಳಿಸಿಕೊಳ್ಳುವುದಕ್ಕಾಗಿ ದನಿಯೆತ್ತುವವರು ಯಾರೂ ಇಲ್ಲ. ಆರ್ಥಿಕ ಸಂಕಟದಲ್ಲಿ ಹೊರಳುತ್ತಿದ್ದ ಈ ದೇಶ ಕಳೆದ ನಾಲ್ವತ್ತು ವರ್ಷಗಳಿಂದ ಸಹಾಯಕ್ಕಾಗಿ ಅಂಗಲಾಚುತ್ತಿದೆ. ಸಹಾಯ ಮಾಡುವುದಂತಿರಲಿ, ಆ ಕಡೆಗೆ ಕಣ್ಣೆತ್ತಿ ನೋಡುವವರೂ ಇಲ್ಲ. ಹಾಗಂತ ನಾವು ಈ ದೇಶವನ್ನು ಮಾತೃಭೂಮಿ, ಮದರ್ ಲ್ಯಾಂಡ್ ಮಾದರ್-ವತನ ಎಂದು ಕರೆಯುತ್ತೇವೆ.

ಯಾರ್, ನಿಮ್ಮ ಓದುಗರಿಗೆ ಒಂದಿಷ್ಟು ಹೇಳು, ಈ ದೇಶವೆಂಬುದು ರಾಮ ಜನ್ಮಭೂಮಿ ಮತ್ತು ಬಾಬರಿ ಮಸೀದಿಗಿಂತ ಹೆಚ್ಚು ಪ್ರಾಮುಖ್ಯವಾದುದು. ಒಂದು ವೇಳೆ ಅದು ಮಸೀದಿಯಾಗಿದ್ದರೆ ಅದು ಈ ದೇಶದಲ್ಲಿದೆ, ದೇವಾಲಯವಾಗಿದ್ದರೆ ಅದೂ ಈ ದೇಶದಲ್ಲಿದೆ. ಈ ದೇಶವೇ ಇಲ್ಲದಿದ್ದರೆ ರಾಮಜನ್ಮ ಭೂಮಿಯೂ ಇರುವುದಿಲ್ಲ, ಬಾಬರಿ ಮಸೀದಿಯೂ ಇರುವುದಿಲ್ಲ.

ಈ ರೀತಿಯ ಜಗಳಗಳು ಕೋರ್ಟಿನಲ್ಲಿ ತೀರ್ಮಾನವಾಗುವಂತಹವಲ್ಲ, ಎಂಬುದನ್ನು ಜನರು ತಿಳಿದಿರಬೇಕು. ಒಂದು ವೇಳೆ ಅಲ್ಲಿ ಮಸೀದಿ ಇರಲಿಲ್ಲವೆಂದು ಕೋರ್ಟು ತೀರ್ಪಿತ್ತರೆ 'ಹಿಂದು ಕೋರ್ಟಿನಿಂದ ಇನ್ನು ಹೆಚ್ಚಿನದೇನನ್ನು ಅಪೇಕ್ಷಿಸಲು ಸಾಧ್ಯ?' ಎಂದು ಇದೇ ಶಹಾಬುದ್ದೀನ್ ಹೇಳುತ್ತಾರೆ, ಅಥವಾ ಒಂದು ವೇಳೆ ಅಲ್ಲಿ ಮಸೀದಿ ಇರಲಿ ಎಂದು ಹೇಳಿದರೆ 'ಸರಕಾರದ ಗುಟ್ಟು ಈಗ ಬಯಲಾಯಿತು. ಓಟಿನ ಸಲುವಾಗಿ ಅದು ಮುಸಲ್ಮಾನರಿಗೆ ಮಸ್ಕಾ ಹೊಡೆಯುತ್ತಿದೆ.' ಎಂದು ವಿಶ್ವ ಹಿಂದೂ ಪರಿಷತ್ ಹೇಳುತ್ತದೆ. ಯಾವ ತೀರ್ಪು ಬಂದರೂ ರಸ್ತೆಯ ಮೇಲೆ ರಕ್ತ ಸುರಿಯುತ್ತದೆ. ಹರಿದು ಹೋಗುತ್ತಿರುವ ಮನುಷ್ಯರ ರಕ್ತಕ್ಕೆ ಬೆಲೆಯಾದರೂ ಏನು! ಇದೇ ದೇಶ ಮುಜಫರ್‌ನಗರ, ಖತೌಲಿ, ಅಲಿಗಢ ಆಗಬಹುದು. ಇವುಗಳ ಜೊತೆಗೆ ಬಿಹಾರದಲ್ಲಿ ಸುಟ್ಟು ಕರಕಾದ ಹರಿಜನ ಬಸ್ತಿಗಳನ್ನೂ, ಬೇಲ್ಛಿಯನ್ನೂ ಸೇರಿಸಿಕೊಂಡರೆ ಪಟ್ಟಿ ಇನ್ನಷ್ಟು ಸ್ಪಷ್ಟವಾಗುತ್ತದೆ.

ನಮ್ಮ ಒಬ್ಬ ಹಿರಿಯ ಮಿತ್ರರಿದ್ದಾರೆ. ಹಳೆಯ ಕಾಂಗ್ರೆಸ್ಸಿಗರಾದ ಕೆ. ಡಿ. ಮಹರಾ. ಪ್ರತಿಯೊಂದು ವಿಷಯದಲ್ಲಿಯೂ ಸಿಐಎ ಕೈವಾಡವಿದೆ ಎನ್ನುವವರು. ಅವರ ಹತ್ತಿರ ಈ ವಿಷಯವನ್ನು ತೆಗೆದುಕೊಂಡು ಹೋದರೆ ನಿರ್ದಾಕ್ಷಿಣ್ಯವಾಗಿ 'ದೇವಾಲಯ ಅಥವಾ ಮಸೀದಿಗಾಗಿ ಈ ದೇಶವನ್ನು ಪಣಕ್ಕಿಡುವವರೆಲ್ಲರೂ ಸಿಐಎ ಏಜಂಟರು!' ಎಂದು ಹೇಳಬಹುದು...ಯಾರಿಗೆ ಗೊತ್ತು, ಇದ್ದರೂ ಇರಬಹುದು!

ಈಗ ಮೂರನೆಯ ವಿಚಾರಕ್ಕೆ ಬರೋಣ. ಇತ್ತೀಚೆಗೆ ಟಿವಿಯಲ್ಲಿ ಅತ್ಯಂತ ಬೋರಿಂಗ್ ಸೀರಿಯಲ್ ಬರುತ್ತಿದೆ. ದೂರದರ್ಶನ ಗೋವಿಂದ ವಲ್ಲಭ ಪಂತರ ಜನ್ಮ ಶತಾಬ್ದವನ್ನು ಆಚರಿಸಿದೆ. ಇದು ಅವರಿಗೆ ನಮ್ಮ ಶ್ರದ್ಧಾಂಜಲಿ. ಪಂತರನ್ನೇ ಯಾಕೆ ಆರಿಸಿದರು ? ಕೆ. ಸಿ. ಪಂತರು ಕೇಂದ್ರ ಮಂತ್ರಿಗಳಾಗಿದ್ದುದರಿಂದಲೇ? ಇನ್ಯಾವ ಉತ್ತರವೂ ನನಗೆ ಹೊಳೆಯುತ್ತಿಲ್ಲ. ರಾಜಾ ಮಹೇಂದ್ರ ಪ್ರತಾಪಸಿಂಹರೆಂಬ ಒಬ್ಬ ಮಹಾಪುರುಷರಿದ್ದರು. ಅವರು ಭಾರತದ ಪ್ರಥಮ ರಾಷ್ಟ್ರಪತಿಯಾಗಿದ್ದರು. ಭಾರತ ಸರಕಾರಕ್ಕೆ ಅವರ ಹೆಸರು ನೆನಪಿದೆಯೆ? ಆಚಾರ್ಯ ನರೇಂದ್ರದೇವ, ಆಚಾರ್ಯ ಕೃಪಲಾನಿ, ಸಿ. ಆರ್. ದಾಸ್, ಸೈಫುದ್ದೀನ್, ಕಿಚಲೂ ರಾಜಗೋಪಾಲಾಚಾರ್ಯ, ಕಾಮರಾಜ, ರಾಮ ಪ್ರಸಾದ್, ಬಿಸ್ಮಿಲ್ಲಾ. ಹುಸೇನ ಅಹಮ್ಮದ ಮದನಿ, ಹಸರತ್ ಮೋಹಾನಿ ತಲೆ ಖರ್ಚು ಮಾಡಿದರೆ ಇನ್ನೂ ಒಂದು ಹೆಸರು ನೆನಪಾಗಬಹುದು, ಕಸ್ತೂರ್‌ಬಾ ಗಾಂಧಿ.

ಇವರಲ್ಲಿ ಯಾರ ಜನ್ಮ-ಶತಾಬ್ದವನ್ನೂ ನಾವು ಆಚರಿಸುತ್ತಿಲ್ಲ. ಕಾರಣ ಇವರಲ್ಲಿ ಯಾರ ಸಂಬಂಧಿಕರೂ ಕೇಂದ್ರ ಮಂತ್ರಿಗಳಲ್ಲ. ನಮ್ಮ ದೇಶದ ರಾಜಕೀಯ ಇನ್ನೂ 'ಅಪ್ಪನ ನಂತರ ಮಗ' ಎಂಬ ಮಾದರಿಯಲ್ಲೇ ಮುಂದುವರಿಯುತ್ತಿದೆ. ಪಂತರ ಜನ್ಮ ಶತಾಬ್ದಿ ಕೈತಲೂ ನೆಹರು ಜನ್ಮ-ಶತಾಬ್ದವನ್ನು ಇನ್ನೂ ಅದ್ಧೂರಿಯಾಗಿ ನಡೆಸುತ್ತಾರೆಂಬುದರಲ್ಲಿ ಸಂಶಯವಿಲ್ಲ! ಆದರೆ ಇಂದಿರಾ ಗಾಂಧಿಯ ಜನ್ಮ ಶತಾಬ್ದದ ಕುರಿತಾಗಿ ನನಗಂತೂ ಸಂದೇಹವಿದೆ. ಆ ವೇಳೆಗಂತೂ ಈ ಉಪಮಹಾದ್ವೀಪದಿಂದ ಕುಟುಂಬವಾದ ಕೊನೆಗೊಂಡಿರುತ್ತದೆ.

ನನಗೆ ನನ್ನ ಬದುಕಿನ ಮೇಲಾಗಲಿ, ಕುರ್ಚಿಯ ಮೇಲಾಗಲಿ ಮೋಹವಿಲ್ಲ. ಹಾಗಾಗಿಯೇ ಇಂತಹ ಕಟು ಸತ್ಯಗಳನ್ನು ಹೇಳುತ್ತಿರುತ್ತೇನೆ. ಗೋಸ್ವಾಮಿ ತುಳಸಿದಾಸರು ಹೇಳುತ್ತಾರೆ-'ಮಾಂಗಿಕೆ ಖಾಯಿಬೊ ಮಸೀತ ಕೊ ಸೋಯಿಬೊ ಲೈಬೆಕೆ ಏಕ್‌ನ ದೈಬೆಕೆ ದೋವು.' (ಬೇಡಿಕೊಂಡು ತಿನ್ನಬೇಕು, ಮಸೀದಿಯಲ್ಲಿಯಲ್ಲಿ ಮಲಗಬೇಕು ಏನನ್ನೂ ತೆಗೆದುಕೊಳ್ಳಬಾರದು, ಕೊಡುವಾಗ ಇಮ್ಮಡಿಯಾಗಿರಬೇಕು)

ಇಲ್ಲಿ ತುಲಸೀದಾಸರು ಯಾವ ಮಸೀದಿಯ ಕುರಿತು ಹೇಳುತ್ತಾರೆ ಎಂಬುದನ್ನು ಪತ್ತೆ ಹಚ್ಚಬೇಕು. ವಿಶ್ವ ಹಿಂದೂ ಹಿತರಕ್ಷಾ ಸಮಿತಿಯ ಬನಾರಸಿನ ಅಧ್ಯಕ್ಷ ವಿಜಯಸಾಗರ ಮಹಾಪಾತ್ರರು ನನ್ನ ಜೊತೆಗೆ ಗೋಸ್ವಾಮಿ ತುಲಸೀದಾಸರನ್ನೂ ಪಾಕಿಸ್ತಾನಕ್ಕೆ ಕಳಿಸುತ್ತಾರೇನೋ?

ಪ್ರೀತಿಯೊಂದಿಗೆ
ನಿಮ್ಮವ,
ರಾಹಿ ಮಸೂಮ ರಜಾ
10, ದೇವದೂತ, ಬಾಂದ್ರಾ
ಬ್ಯಾಂಡ್ ಸ್ಟ್ಯಾಂಡ್, ಮುಂಬಯಿ

ಕುಮಾರ ಗಂಧರ್ವರು ಒಮ್ಮೆ ಖ್ಯಾತ ವಾಸ್ತು ಶಿಲ್ಪಿ ಚಾರ್ಲ್ಸ್ ಕೊರೆಯ ಹೊಸ ಹೊಸ ಆಕಾರಗಳಲ್ಲಿ ರಚಿಸಿದ್ದ ಕಟ್ಟಡಗಳನ್ನು ನೋಡಿ ಸಂಗೀತದ ಆರೋಹಣ ಅವರೋಹಣಗಳನ್ನು ಜೋಡಿಸಿದರಂತೆ. ಕಟ್ಟಡಗಳ ಶಿಲ್ಪವೇ ಸಂಗೀತದ ದನಿ ಮೂಡಿಸುವುದಾದರೆ ಕಲೆಗಳ ನಡುವೆ ಸಂಬಂಧ ಇಲ್ಲ ಎನ್ನುವುದಾದರೂ ಹೇಗೆ?

ಸಾಹಿತ್ಯ, ರಂಗಭೂಮಿ, ಚಿತ್ರಕಲೆಗಳು ಒಂದರೊಂದಿಗೊಂದು ಬೆಸೆದುಕೊಂಡಿವೆ. ಎಲ್ಲಾ ಕಲೆಗಳ ಮಧ್ಯೆ ಕೊಟ್ಟುಕೊಳ್ಳುವಿಕೆ ಸಾಕಷ್ಟು ನಡೆದಿದೆ. ರಂಗಭೂಮಿಯಲ್ಲಂತೂ ಈ ಸಂಬಂಧಗಳು ಗಾಢವಾಗಿದೆ. ರಂಗಭೂಮಿ- ಸಾಹಿತ್ಯ, ಚಿತ್ರಕಲೆ, ನೃತ್ಯದೊಂದಿಗೆ ಬೆಸೆದುಕೊಂಡೇ ಬಂತು.

ಮಾನಸದ ಪೀಳಿಗೆಯು ಮುಂದೆ ಇರುವಂತಹದ್ದು ಈ ಎಲ್ಲಾ ಕಲೆಗಳ ಬಗ್ಗೆ ಸಹ ಸಂಬಂಧವಿಲ್ಲದಿದ್ದರೆ ರಂಗಭೂಮಿ ನಡೆಯುವುದಕ್ಕೆ ಸಾಧ್ಯವಿರಲಿಲ್ಲ.

ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ (ಎನ್‌ಎಸ್‌ಡಿ) ದಲ್ಲಾದ ಪ್ರಯೋಗಗಳನ್ನು ನೋಡಿ. ಡಾ। ಅಲ್ಕಾಜಿ ಎನ್.

ಕಾರಂತರು ಕಂಡಂತೆ

ಸಾಹಿತ್ಯ ರಂಗಭೂಮಿ ಚಿತ್ರಕಲೆ ಸಂಬಂಧಗಳು

ಈ ಎಲ್ಲಾ ಸಂಬಂಧಗಳಿಂದಾಗಿ ರಂಗಭೂಮಿ ಆಧುನಿಕವಾಗಿದೆ. ಆಧುನಿಕ ರಂಗಭೂಮಿ ಎಂದು ಈಗ ನಾವು ಕರೆಯುತ್ತಿರುವುದು ನನ್ನ ಪ್ರಕಾರ ಸಾಹಿತ್ಯ, ನೃತ್ಯ, ಚಿತ್ರಕಲೆಯೊಂದಿಗೆ ಸಂಬಂಧಗಳನ್ನು ಬೆಳೆಸಿಕೊಂಡು ಬಂದ ರಂಗಭೂಮಿಯನ್ನು. ಪ್ರಾಚೀನ ರಂಗಭೂಮಿ ಎಂದರೆ ಯಾವುದು? ನನ್ನ ಪ್ರಕಾರ ಈ ಸಂಬಂಧಗಳಿಗೆ ತೆರೆದುಕೊಂಡಿರದಿದ್ದ ರಂಗಭೂಮಿಯೇ ಪ್ರಾಚೀನ.

ಎಸ್.ಡಿ ಯ ನಿರ್ದೇಶಕರಾಗಿದ್ದಾಗ ಚಿತ್ರಕಲೆಗೆ ಹೆಚ್ಚು ಒತ್ತುಕೊಟ್ಟರು. ಪ್ರತಿಯೊಬ್ಬ ನಾಟಕದ ವಿದ್ಯಾರ್ಥಿ ಪಿಕಾಸೋ, ಸಂಕಾಲ್ ಬಸು, ಪುಸ್ತಕಗಳನ್ನು ಓದಬೇಕಿತ್ತು. ರಂಗಭೂಮಿಯಲ್ಲಿರುವವರಿಗೆ ಚಿತ್ರ ಕಲಾವಿದರ ಬಗ್ಗೆ ಹೆಚ್ಚು ಗೌರವ ಇದೆ. ನಾಟಕದಲ್ಲಿ ಕಂಪೋಸಿಷನ್, ಬ್ಲಾಕ್ ಮೇಕಿಂಗ್, ಬರ್ಡ್ಸ್ ವ್ಯೂ ಇತ್ಯಾದಿ ಬಳಸುತ್ತೇವೆ. ಇದೆಲ್ಲ ಚಿತ್ರಕಲೆಯಿಂದ ದತ್ತು ತೆಗೆದುಕೊಂಡದ್ದೇ.

ರಂಗಭೂಮಿಯಲ್ಲಿ ಬಿ. ವಿ. ಕಾರಂತರದ್ದು ಪ್ರಮುಖ ಹೆಸರು. ಹಲವು ವೈಯಕ್ತಿಕ ವಿವಾದಗಳ ಹೊರತಾಗಿಯೂ ರಂಗಭೂಮಿಯ ಜತೆ ಅವರು ಸಾಧಿಸಿರುವ ತಾದಾತ್ಮ್ಯ ಪ್ರಶ್ನಾತೀತವಾದುದು. ಸಾಹಿತ್ಯ, ರಂಗಭೂಮಿ ಮತ್ತು ಚಿತ್ರಕಲೆಯ ನಡುವಣ ಸಂಬಂಧಗಳ ಬಗ್ಗೆ ಬಿ. ವಿ. ಕಾರಂತರ ಆಶಯ, ಅನಿಸಿಕೆಗಳು ಇಲ್ಲಿವೆ.

ಗುಬ್ಬಿ ಕಂಪೆನಿಯ ನಾಟಕಗಳು ಆಧುನಿಕ ರಂಗಭೂಮಿಯ ಚೌಕಟ್ಟಿನಲ್ಲಿರಲಿಲ್ಲ ಅವರು ಸಂಸ್ಕೃತ ಶಾಸ್ತ್ರಗಳ ನಾಟಕ ಅಭಿನಯಿಸಿದರೂ ಅದು ಸ್ಕ್ರಿಪ್ಟ್ ಆಗಿತ್ತೇ ಹೊರತು ಕಲೆಗಳ ಸಾಮರಸ್ಯದಿಂದ ಶ್ರೀಮಂತವಾದ ಸಾಹಿತ್ಯವಾಗಿರಲಿಲ್ಲ ಹಿಂದೆ ಗುಬ್ಬಿವೀರಣ್ಣ ಮತ್ತು ಮಾಸ್ತಿ ವೆಂಕಟೇಶ ಐಯ್ಯಂಗಾರ್ ಒಮ್ಮೆ ಚರ್ಚೆ ಮಾಡಿದ್ದು ನನ್ನ ನೆನಪಿಗೆ ಬರುತ್ತೆ.

ನಿರೂಪಣೆ: ಜಿ.ಎಸ್. ಮೋಹನ್
ಸ್ವಾತಿ ಸಿಂಡಿಕೇಟ್ಸ್

ಗುಬ್ಬಿವೀರಣ್ಣ ನಾಟಕಗಳೆಲ್ಲ ಅಂತ ಕೊರಗ್ತಾ ಇದ್ರು. ಆಗ ಮಾಸ್ತಿಯವರು ಹೇಳಿದ್ರು, ನೀವು ನಮ್ಮ ಕಡೆ ಒಂದು ಚಿಟಿಕೆ ಹಾರಿಸಿ ಸಾಕು, ನಾವು ನೂರು ನೂರು ನಾಟಕಗಳನ್ನು ಬರೆದುಕೊಡ್ತೇವೆ. ಅಂದರೆ ಸಾಹಿತ್ಯದ ಕಲೆಗಳನ್ನು ಇನ್ನೂ ಆಗಿನ ರಂಗಭೂಮಿ ಒಳಗೊಂಡಿರಲಿಲ್ಲ. ಹಾಗಾಗಿ ಅದು ಆಧುನಿಕವೂ ಆಗಿರಲಿಲ್ಲ.

ರಂಗಭೂಮಿ ಇತರೆ ಎಲ್ಲಾ ಪ್ರಕಾರಗಳ ಸಂಗಮ ಎಂದೇ ಹೇಳಬಹುದು ರಂಗಭೂಮಿಯಲ್ಲಿ ಅಂಗಿಕ, ವಾಚಿಕದಂತೆ 'ಆಹಾರ್ಯ'ವೂ ಇದೆ. ಇದು ನೇರವಾಗಿ, ಚಿತ್ರಕಲೆಯೊಡನೆ ಸಂಬಂಧವಿರುವಂತಹದ್ದು. ಉದಾಹರಣೆಗೆ ಯಕ್ಷಗಾನದ ಕಿರೀಟ, ಮುಖವರ್ಣಿಕೆ ನೋಡಿ. ಒಬ್ಬ ನಟನಾದವನು ಕಿರೀಟದ ಕೋನ, ಆಕಾರ, ಅದಕ್ಕೆ ಯಾವ ಬಣ್ಣ ಲೇಪಿಸಬೇಕು, ರಾಕ್ಷಸ ಪಾತ್ರಗಳಿಗಾದರೆ ಹೇಗೆ, ಸಜ್ಜನ ಪಾತ್ರಗಳಿಗೆ ಹೇಗೆ ಎಂದು ಬಣ್ಣ, ಆಕಾರಗಳ ಬಗ್ಗೆ ಕಲೆ ಕಲಿಸಿಕೊಳ್ಳುತ್ತಾನೆ ಹೀಗಾಗಿ ಚಿತ್ರಕಲೆಯೊಂದಿಗೆ ತಾನೇ ತಾನಾಗಿ ಸಂಬಂಧ ಬೆಳೆದುಬರುತ್ತದೆ.

ರಂಗಭೂಮಿ ಒಂದು ರೀತಿಯಲ್ಲಿ ಎಲ್ಲಾ ಕಲೆಗಳನ್ನು ಕ್ರೋಢೀಕರಿಸಿ ವರ್ತ-

ಭರತ ಮುನಿ ತನ್ನ ನಾಟ್ಯ ಶಾಸ್ತ್ರ ಬರೆಯುತ್ತಾ ನಾಟ್ಯಶಾಸ್ತ್ರದಲ್ಲಿ ಯಾವುದೂ ತ್ಯಾಜ್ಯವಲ್ಲ ಎನ್ನುತ್ತಾನೆ. ಹಾಗಾಗಿಯೇ ಕಲೆಗಳೂ ಒಂದಲ್ಲ ಒಂದು ರೀತಿಯಲ್ಲಿ ಇಲ್ಲಿ ಬೆಸೆದುಕೊಂಡಿದೆ. ರಂಗಭೂಮಿಗೆ ಎಲ್ಲಾ ಕಲೆಗಳ ಒಡನಾಟಬೇಕು.

ಹವ್ಯಾಸಿ ರಂಗಭೂಮಿಗೆ ಸಾಹಿತ್ಯದ ವಿಶೇಷ ಮಹತ್ವವಿದೆ. ಯಾವ ಶೈಲಿಯೂ ಒಂದೇ ಆಗಿರಬಾರದು. ಬೆಳೆಯುತ್ತಾ ಹೋಗಬೇಕು. ಅಲ್ಕಾಜಿ ನಿರ್ದೇಶಿಸಿದ 'ತುಘಲಕ್' ನಾಟಕ ನೋಡಿದ ಕಲಾವಿದರೊಬ್ಬರು 'ಈ ದಿನಾ ನಾನು ಎರಡು ಕಲಾಕೃತಿಗಳನ್ನು ರಚಿಸುತ್ತೇನೆ' ಎಂದರಂತೆ ಹಾಗೆ ಒಂದು ಕಲೆ ಇನ್ನೊಂದು ಕಲೆಯ ಕಾವನ್ನು, ತಿರುಳನ್ನು, ಒಳಗೊಂಡಿರುತ್ತದೆ. ಒಂದು ಕಲೆ ಅಲ್ಲಿ ಉಕ್ಕಿ ಇಳಿಸಿ ಹರಿಬೇಕು

'ಮಹಾಬೋಧಿ' ನಾಟಕಕ್ಕೆ ವಿಚಿತ್ರ ರೀತಿಯ ಸೆಟ್ ಇತ್ತು. ಈ ನಾಟಕವನ್ನು ಮೂರು ಕಡೆಗಳಿಂದ ನೋಡಿದರೆ ಮೂರು ರೀತಿಯ ಭಿನ್ನ ಅನುಭವವಾಗುತ್ತಿತ್ತು. ರಂಗಭೂಮಿಗೆ ಡೈಮೆನ್‌ಷನ್‌ಗಳನ್ನು ನೀಡುವ ಕಾಲ ಇದು. ಒಂದೊಂದು ಕಡೆ ಒಂದೊಂದು ರೀತಿಯ ಅನುಭವಉಂಟು ಮಾಡುವುದು ನಾವು ಇತರ ಕಲೆಯಿಂದ ಎರವಲು ಪಡೆದದ್ದೇ.

ಮುಖ್ಯವಾಗಿ ಈ ಎಲ್ಲಕ್ಕೂ ಸೆನ್ಸಿಟಿವಿಟಿ ಇರಬೇಕು. ಅದಿಲ್ಲದಿದ್ದರೆ ಯಾವ ಪ್ರಕಾರವೂ ಬೆಳೆಯುವುದಿಲ್ಲ.

ನಾವು ಈಗಿನ ಸಂದರ್ಭದಲ್ಲಿ ಇತರೆ ಮಾಧ್ಯಮಗಳಿಂದ ಪೆಟ್ಟಿಗೆ ಏನನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಾರಣ ನಮ್ಮ ಮಿತಿಗಳು ಹಾಗೂ ಮಾಧ್ಯಮದ ಮಟ್ಟಗಳು, ಚಿತ್ರಕಲೆ, ಸಾಹಿತ್ಯ ರಂಗಭೂಮಿ ಸಂಬಂಧ ಅತಿ ವಿಶಿಷ್ಟವಾದುದು. ಇವು ಒಟ್ಟಾಗಿ ಕೆಲಸ ಮಾಡಿ ಒಂದು ಆಂದೋಳನವಾಗಿ ಮೂಡುವಂತೆ ನಾವು ನೋಡಿಕೊಳ್ಳಬೇಕು





ಮಕ್ಕಳ ತೋಟ

ಆಜ್ಞಾಪಾಲಕ!

ಆತನೊಬ್ಬ ಪ್ರಸಿದ್ಧ ವಕೀಲನಾಗಿದ್ದ. ಆತನಿಗೊಬ್ಬ ಪೆದ್ದ ಸಹಾಯಕ. ಎಷ್ಟು ಪೆದ್ದನೆಂದರೆ, ತುಂಬಾ ಸಲ ಆತನನ್ನು ಕೆಲಸದಿಂದ ತೆಗೆದು ಹಾಕಲು ಯೋಚಿಸಿದ್ದ ವಕೀಲ. ಆದರೆ ಆತ ತುಂಬಾ ಬಡವನಾಗಿದ್ದ. ಆದ್ದರಿಂದ ಆತನ ಮೇಲಿನ ಕರುಣೆಯಿಂದ ಆತನನ್ನು ಕೆಲಸದಿಂದ ತೆಗೆದು ಹಾಕಿರಲಿಲ್ಲ. ಇಂದಲ್ಲ ನಾಳೆ ಸುಧಾರಿಸಬಹುದು ಎಂದು ಕೊಂಡಿದ್ದ ವಕೀಲ. ಅಸಹಾಯಕನ ಹೆಸರು ಬೀರ.

ಒಮ್ಮೆ ವಕೀಲ ಆಫೀಸಿನ ಕೆಲಸ ಮುಗಿಸಿಕೊಂಡು ಬೀರನೊಡನೆ ಮನೆಗೆ ಹಿಂತಿರುಗುತ್ತಿದ್ದ. ಮುಖದಿಂದ ಬೆವರು ಇಳಿಯುತ್ತಿದ್ದನ್ನು ನೋಡಿ ವಕೀಲ ಜೇಬಿನಿಂದ ಕರವಸ್ತ್ರ ತೆಗೆದ. ಕರವಸ್ತ್ರ ತೆಗೆಯುವಾಗ ಆತನ ಹಣದ ಪರ್ಸ್ ಬಿದ್ದು ಹೋಯ್ತು. ಅದನ್ನು ಬೀರ ನೋಡಿ "ಓ ಹೋ...ಸಾಹೇಬರ ಪರ್ಸ್ ಬಿದ್ದು ಹೋಯ್ತು! ಎಂದು ಕೊಂಡನೇ ವಿನಾ ಅದನ್ನು ಎತ್ತಿಕೊಂಡು ವಕೀಲನಿಗೆ ನೀಡಲೂ ಇಲ್ಲ. ಆತನಿಗೆ ಪರ್ಸ್ ಬಿದ್ದ ವಿಷಯ ಹೇಳಲೂ ಇಲ್ಲ...

ಮನೆಗೆ ಬಂದು ವಕೀಲರು ತನ್ನ ಕೋಟಿನ ಜೇಬನ್ನು ತಡಕಿ ನೋಡುತ್ತಾನೆ. ಹಣದ ಪರ್ಸ್ ಇಲ್ಲ. ಆತ ತುಸು ಗಾಬರಿಯಾಗಿ

"ಓ...ನನ್ನ ಪರ್ಸ್!" ಎಂದ. ಆಗ ಬೀರ,

"ಸಾಹೇಬ್ರಾ...ನಿಮ್ಮ ಪರ್ಸ್ ನೀವು ಕರವಸ್ತ್ರ ತೆಗೆಯುವಾಗ ಬಿದ್ದು ಹೋಯ್ತು ರಸ್ತೆಯ ಮೇಲೆ..."ಎಂದ ವಕೀಲ ಸ್ವಲ್ಪ ಕೋಪದಿಂದ–

"ಮಂಕೆ...ಯಾಕೆ ಅದನ್ನು ಎತ್ತಿಕೊಳ್ಳಲಿಲ್ಲ...? ನನಗೇಕೆ ಹೇಳಲಿಲ್ಲ. ಮುಂದೆ ಇನ್ನೊಮ್ಮೆ...ನನ್ನಿಂದ ಬಿಸಾಡಲ್ಪಟ್ಟ ಏನಾದ್ರೂ ವಸ್ತುಸಿಕ್ಕಿದರೆ ಕೂಡಲೇ ಎತ್ತಿಕೊಂಡು ತಂದು ಕೊಡು..." ಎಂದ.

"ಸರಿ ಸ್ವಾಮಿ" ಎಂದ ಬೀರ.

ಮರುದಿನ ವಕೀಲ ಕೋರ್ಟಿನಲ್ಲಿ ಏನೋ ವಾದದಲ್ಲಿ ತೊಡಗಿದ್ದ. ಆಗ ಬೀರ ಅಲ್ಲಿಗೆ ನುಗ್ಗಿ ಬಂದು,

"ಸಾಹೇಬ್ರಾ... ಸಾಹೇಬ್ರಾ... ತಗೊಳ್ಳಿ...ನಿಮ್ಮ ಸಿಗರೇಟಿನ ತುಂಡುಗಳು ಬಿದ್ದು ಕೊಂಡಿದ್ದವು...!"ಎಂದು ಕೈ ನೀಡಿದ. ಆತನ ಕೈಯಲ್ಲಿದ್ದ ನೀವು ಬಿಸಾಡಿದ್ದ ಸಿಗರೇಟಿನ ತುಂಡುಗಳನ್ನು ನೋಡಿ ಎಲ್ಲರೂ ಗೊಳ್ಳೆಂದು ನಕ್ಕರು. ವಕೀಲ ಕೋಪಗೊಂಡು ಮನೆಗೆ ಬಂದು.

"ಏನೋ...ಪೆದ್ದ... ಕೋರ್ಟಿನಲ್ಲಿ ಎಲ್ಲರ ಎದುರಿಗೂ ನನ್ನನ್ನು ಅವಮಾನಗೊಳಿಸಿದೆಯಲ್ಲ...ಇನ್ನು ಮುಂದೆ ಇತರ ಕೆಲಸಗಾರರೊಡನೆ ಮನೆಯಲ್ಲಿಯೇ ಇರು ಹಾಗೆ ಏನಾದ್ರೂ ಅರ್ಜೆಂಟಾಗಿ ಬೇಕಾದ್ರೆ ಕೋರ್ಟಿಗೆ ಬಾ..." ಎಂದು, ಬೈದನು.

ಮರುದಿನ ಆಫೀಸಿನಲ್ಲಿ ವಕೀಲ, ತನ್ನ ಗಿರಾಕಿಗಳೊಡನೆ ಮಾತನಾಡುತ್ತ ಕುಳಿತ್ತಿದ್ದ. ಆಗ ಬೀರ ಅಲ್ಲಿಗೆ ನುಗ್ಗಿ ಬಂದು.

"ಸಾಹೇಬ್ರು"ಮನೆಯಲ್ಲಿ ಅಕ್ಕಿ ಖಾಲಿಯಾಗಿದೆ...ಏನು ಮಾಡ್ಲಿ..ಊಟಕ್ಕೆ..?" ಎಂದ. ವಕೀಲನ ಗಿರಾಕಿಗಳು ಫಕ್ಕನೆ ನಕ್ಕರು. ವಕೀಲ ದಾರಿಯಲ್ಲಿ ಕೋಪದಿಂದ ಬೀರನಿಗೆ,

"ನೋಡು ಬೀರ.. ನಾನು ಮಾತನಾಡುತ್ತಿರುವಾಗ ಮಧ್ಯೆ ಬಂದು ತೊಂದರೆ ಕೊಡಬೇಡ... ನನ್ನ ಮಾತು ಮುಗಿಯುವ ವರೆಗೂ ಸುಮ್ಮನೆ ನಿಂತಿರು. ತಗೋ ಹಣ ಅಕ್ಕಿ ತೆಗೆದುಕೊಂಡು ಬಾ..." ಎಂದು ಕಳುಹಿಸಿದ.

ಮರುದಿನ ಬೀರ ಮತ್ತೊಮ್ಮೆ ವೇಗವಾಗಿ ಓಡಿ ಬಂದು ನೋಡುತ್ತಾನೆ. ವಕೀಲ ಕೆಲವರೊಡನೆ ಮಾತನಾಡುತ್ತಿದ್ದಾನೆ.

'ಓ.., ಸಾಹೇಬ್ರು... ಮಾತನಾಡುತ್ತಿದ್ದಾರೆ...ಅವರ ಮಾತು ಮುಗಿಯುವ ವರೆಗೆ ತೊಂದರೆ ಕೊಡುವುದು ಬೇಡ' ಎಂದು ಚಡಪಡಿಸುತ್ತಲೇ ನಿಂತ! ವಕೀಲ ತನ್ನ ಗಿರಾಕಿಗಳನ್ನು ಒಂದೆರಡು ಗಂಟೆ ಮಾತುಕತೆಯ ನಂತರ ಕಳುಹಿಸಿ...ಬೀರ ನತ್ತ ತಿರುಗಿ,

"ಏನು... ಮನೆಯಲ್ಲಿ ಗೋಧಿ ಹಿಟ್ಟು ಖಾಲಿಯಾಗಿದೆಯಾ...? ಎಂದು ಪ್ರಶ್ನಿಸಿದ.

"ಅಲ್ಲ... ಸಾಹೇಬ್ರಾ...ಮನೆಗೆ ಬೆಂಕಿ ಹಿಡಿದಿದೆ ಎಂದು ಹೇಳಲು ಬಂದೆ... ಈಗ ಅದು ಪೂರ್ತಿ ಸುಟ್ಟು ಹೋಗಿರಬೇಕು...!" ಎಂದ ಬೀರ.

ವಕೀಲ ಗಾಬರಿಯಿಂದ...

"ಮೊದಲೇ ಏಕೋ ಹೇಳಲಿಲ್ಲ... ಬೆಂಕಿ ಬಿದ್ದಿದೆ ಮನೆಗೆ ಎಂದು?" ಎಂದ ಕೋಪದಿಂದ ಅದುರುತ್ತ!

ಅದಕ್ಕೆ ಬೀರ ಕೊಟ್ಟ ಸಮಜಾಯಿಸಿ,

ನೀವೇ... ಹೇಳಿದ್ರಲ್ಲ ಸಾಹೇಬ್ರಾ... ಮಾತನಾಡುತ್ತಿರುವಾಗ ಮಧ್ಯೆ ಬಂದು ತೊಂದರೆ ಪಡಿಸ ಬೇಡ ಎಂದು.. ಅದಕ್ಕೆ ನಾನು ನಿಮ್ಮ ಮಾತು ಕತೆ ಮುಗಿಯುವ ವರೆಗೆ ನಿಂತೆ..."

ಆಗ ವಕೀಲನ ಮುಖ ನೋಡಬೇಕು.

— ಬಿ.ಎನ್.ಯಶವಂತ್, ಶಾಸ್ತ್ರಿ

"ಹಳ್ಳಿಯ ಯಜಮಾನ"

ಒಂದು ಹಳ್ಳಿಯಲ್ಲೊಬ್ಬ ಯಜಮಾನ.
ಯಾರೂ ಇಲ್ಲ ಅವನಿಗೆ ಸರಿ ಸಮಾನ.
ಕೊಡುವನು ಊರ ಜಗಳಕ್ಕೆಲ್ಲ ನ್ಯಾಯ.
ಮರು ಮಾತಿಲ್ಲದೆ ಜಗಳವೆಲ್ಲ ಮಾಯ.

ಬಂತು ಹಳ್ಳಿಯ ಯಜಮಾನನಿಗೆ ಜಂಬ.
ಭಾವಿಸಿದ ನಮ್ಮೂರ ಜನರೆಲ್ಲ ಹುಂಬ,
ತಾನಿಲ್ಲದೆ ಇದ್ದರೆ ಇವರಿಗಿಲ್ಲ ಗತಿ.
ತಾನೇ ಊರ ಜನರಿಗೆಲ್ಲಾ ಮತಿ.

ತಿಳಿಯಿತು ಹಳ್ಳಿಯ ಜನಕೆ ಇವನ ಸೊಕ್ಕು.
ತೋರಿಸಲೇಬೇಕು ಮರ್ಯಾದೆಯ ದಿಕ್ಕು.
ಏರ್ಪಡಿಸಿದರು ಒಂದು ನೀತಿಯ ನಾಟಕ.
"ಜಂಬದ ಅಜ್ಜಿಯ ಹುಂಜದ ಕಥನ."

"ಅಜ್ಜಿಯ ಕೋಳಿ ಕೂಗಿದರೆ ಬೆಳಗು.
ಇಲ್ಲದೆಯಿದ್ದರೆ ಮುಗಿಯದು ಕತ್ತಲು.
ಎನ್ನುವ ಮಾತು ಎಷ್ಟೊಂದು ಮುಚ್ಚು
ಅದಕ್ಕಾಗಿ ಅರಿತು ಬಾಳಲು ನೆಚ್ಚು."

ಹಳ್ಳಿಯ ಜನರು ಆಡಿಸಿದ ನಾಟಕ,
ಬುದ್ಧಿ ಪಡೆದ ಈ ಯಜಮಾನ.
'ಕೊಟ್ಟಿರುವ ಗೌರವ ಉಳಿದರೆ ಸಾಕು.
ದುರಾಹಂಕಾರ ತನಗೆ ತರವಲ್ಲ' ಎಂದ.

—ಎಂ. ಆರ್. ಮಂಜುನಾಥ

ಕೇಸರಿ ಮೂಷಕ ಸಖ್ಯ

ಶ್ರೀ

ನಾನು ಮೇಲು
ನೀನು ಕೀಳು
ಸಿಂಹ ಇಲಿಗೆ ಹೇಳಿತು

ಭೇದ ಬೇಡ
ಸ್ನೇಹವಿರಲಿ
ಕೇಸರಿಗೆ ಇಲಿ ಬೇಡಿತು

ಅಲ್ಪ ನೀನು
ಯಾವ ಲೆಕ್ಕ
ಹೋಗು ಬಿಲದಿ ಅಡಗಿಕೊ

ಪುಟ್ಟದೆಂದು
ಮೂದಲಿಸದಿರು
ಉಪಕಾರಿ ನಾನು ತಿಳಿದುಕೊ.

ತಿಂಗಳೆರಡು
ಕಳೆದಿರಲು
ಬೇಡನಿಟ್ಟ ಬಲೆಗೆ
ಸಿಂಹ ಸಿಲುಕಿ
ಭಯದಿ ತಾನು
ಒಂದೆ ಸಮನೆ ಗುಡುಗಿ
ಭಯವು ಬೇಡ
ನನ್ನ ಒಡೆಯ
ನಾನು ಪಾರು ಮಾಡುವೆ
ಕಿರಿದು ನಾನು
ಆದರೇನು
ಕಾರ್ಯ ಮಾಡಿ ತೋರುವೆ
ಇಲ್ಲಿಯು ಬಲೆಯ
ಕಟಕಟನೆ
ಕಡಿದು ದಾರಿ ಮಾಡಿತು
ಜೀವ ಭಯದಿ
ನಡುಗುತಿರುವ
ಸಿಂಹವನ್ನು ಉಳಿಸಿತು,
ಮೇಲು ಕೀಳು
ಭೇದಭಾವ
ಇಂದು ನಾನು ಮರೆವೆನು
ಇನ್ನು ನೀನು
ಆಪ್ತ ನನಗೆ
ಎಂದು ನಾನು ತಿಳಿವೆನು
ಎಲ್ಲರೊಡನೆ
ಸ್ನೇಹ ಪ್ರೀತಿ
ಗಳಿಸುವವಗೆ ಉನ್ನತಿ
ಗರ್ವದಿಂದ
ಬೀಗುವವನು
ಕಾಣ್ಬ ತಾನು ದುರ್ಗತಿ

— ಕೆ. ಚಂ. ಕಾನೂರ್,
ಕೋಟೇಶ್ವರ

ಚಿತ್ರ: ಸಿ. ಎಚ್. ರಾಜಶೇಖರ್

ಚಿತ್ರ: ಆರ್. ಕೆ. ಸ್ಟುಡಿಯೋ

ಬೇಡತಿ ಬೇಡವಾದರೆ ಕೈಗಾ ಅನಿವಾರ್ಯ ಆಗುತ್ತದೆ

ಕಾರವಾರದ ಬಳಿಯ ಕೈಗಾದಲ್ಲಿ ಅಣುವಿದ್ಯುದಾಗಾರದ ನಿರ್ಮಾಣ ಆಗಬೇಕೇ?–ಅಥವಾ ಬೇಡವೇ ಎಂಬುದೀಗ ದೊಡ್ಡ ವಿವಾದಾಸ್ಪದ ವಿಷಯವಾಗಿದೆ. ವಿದ್ಯುತ್ ಅಭಾವ ಪೀಡಿತವಾಗಿರುವ ಕರ್ನಾಟಕಕ್ಕೆ ಅತೀ ಜರೂರಾಗಿ ಬೇಕಾಗಿರುವ ಬೃಹತ್ ಪ್ರಮಾಣದ ವಿದ್ಯುತ್ ಉತ್ಪಾದನೆಗೆ ಕೈಗಾ ಅಣು ವಿದ್ಯುದಾಗಾರದ ನಿರ್ಮಾಣ ಅತೀ ಅಗತ್ಯವೆಂದು ರಾಜ್ಯ ಹಾಗೂ ಕೇಂದ್ರ ಸರಕಾರಗಳು ಮತ್ತು ದೇಶದ ಅಣುಶಕ್ತಿ ಆಯೋಗ ಹೇಳುತ್ತಿವೆ. ಅಣುವಿದ್ಯುದಾಗಾರದಿಂದ ಪರಿಸರದ ಮೇಲೆ ಯಾವುದೇ ದುಷ್ಪರಿಣಾಮವಾಗದಂತೆ ನೋಡಿಕೊಳ್ಳುವುದಾಗಿಯೂ ಇವರು ಭರವಸೆ ಕೊಡುತ್ತಿದ್ದಾರೆ. ರಾಜ್ಯದ ಎಲ್ಲ ಆರ್ಥಿಕ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ಕೊಡಲು ಬೇಕಾದ ವಿದ್ಯುತ್ ಬೇಡಿಕೆಯನ್ನು ಪೂರೈಸಿಕೊಳ್ಳಲು ಅಣುವಿದ್ಯುದಾಗಾರವಲ್ಲದೆ ಬೇರೆ ದಾರಿ ಇಲ್ಲವೆಂಬುದು ಇವರ ಅಂಬೋಣ.

ಅಣುವಿದ್ಯುದಾಗಾರ ಬೇಡವೇ ಬೇಡವೆಂದು ಪಟ್ಟು ಹಿಡಿದಿರುವ ನಾಡಿನ ವಿಚಾರವಂತ ಪರಿಸರ ಪ್ರೇಮಿಗಳು ಅಣುವಿದ್ಯುದಾಗಾರದಿಂದ ಹೊರಹೊಮ್ಮುವ ಅಣುವಿಕಿರಣ ಕೈಗಾ ಪರಿಸರದಲ್ಲಿ ಜನರನ್ನು ನಿಧಾನವಾಗಿ ಸಾಯಿಸುವುದು ಮಾತ್ರವಲ್ಲದೆ ಪರಿಸರವನ್ನು ಪೂರ್ಣವಾಗಿ ಮಲಿನಗೊಳಿಸುವುದೆಂಬ ಭಯ ವ್ಯಕ್ತಪಡಿಸಿದ್ದಾರೆ. ಅಧುನಿಕ ವಿಜ್ಞಾನದಲ್ಲಿ ಭಾರತಕ್ಕಿಂತ ಬಹಳ ಮುಂದಿರುವ ಅನೇಕ ಮುಂದುವರಿದ ದೇಶಗಳು ಕಟ್ಟಿರುವ ಅಣುವಿದ್ಯುದಾಗಾರಗಳನ್ನು ವಿಸರ್ಜಿಸಿ ಹೋಗುತ್ತಿರುವ ಇಂದಿನ ಸನ್ನಿವೇಶದಲ್ಲಿ ಭಾರತವು ಹೊಸ ಅಣುವಿದ್ಯುದಾಗಾರಗಳನ್ನು ಕಟ್ಟಲು ಹೊರಟಿರುವುದರ ಸೂಕ್ತತೆಯನ್ನು ಇವರು ಪ್ರಶ್ನಿಸುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳಿಗೆ ಅಣುಶಕ್ತಿ ಬಳಕೆಯಲ್ಲಿ ಅಪಾಯವನ್ನು ಬಹುದಾದ ಪರಿಣತಿ ಪಡೆದಿರುವ ರಷ್ಯಾದ ಚೆರ್ನೋಬೈಲ್ ಅಣುವಿದ್ಯುದಾಗಾರದಲ್ಲಿ ಅಣುವಿಕಿರಣ ಸೋರಿಕೆಯಾಗಿ ಒಂದು ದೊಡ್ಡ ಪ್ರದೇಶವೇ ಜನವಸತಿಗೆ ಅಯೋಗ್ಯವಾದ ದುರಂತದ ಹಿನ್ನೆಲೆ ಕೈಗಾ ಅಣುವಿದ್ಯುದಾಗಾರ ವಿರೋಧಿಗಳ ನಿಲುವಿಗೆ ಬಲ ಕೊಡುತ್ತದೆ. ಅಣುವಿದ್ಯುದಾಗಾರ ಎಲ್ಲಿಯೇ ಆಗಲಿ–ಅದೆಷ್ಟೇ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಲಿ ವಾಸ್ತವವಾಗಿ ಅದು ಪರಿಸರದ ಜನರಿಗೆ ವಿಷ ಉಣ್ಣಿಸುವ ಕಾರ್ಖಾನೆಯಾಗುವುದೆಂಬ ವೈಜ್ಞಾನಿಕ ಸತ್ಯವನ್ನು ಮರೆಮಾಚಲು ಯಾರಿಂದಲೂ ಸಾಧ್ಯವಾಗಿಲ್ಲ.

ಭಾರತದ ಅಣುಶಕ್ತಿ ಆಯೋಗದವರು ಈಗ ಕೈಗಾದಲ್ಲಿ ಅಣುವಿದ್ಯುದಾಗಾರದ ನಿರ್ಮಾಣ ಕಾರ್ಯದಲ್ಲಿ ವ್ಯವಹರಿಸಿದ್ದಾರೆ. ಪರಿಸರ ಪ್ರೇಮಿಗಳ ವಿರೋಧವನ್ನು ಗೌಣವಾಗಿ ಕಾಣುತ್ತಿದ್ದಾರೆ.

ವಿದ್ಯುತ್ ಉತ್ಪಾದನೆಯ ವಿಚಾರದಲ್ಲಿ ಕರ್ನಾಟಕವು ಇಂತಹ ಒಂದು ದುರಂತದ ಅಂಚಿಗೆ ಬರುವುದೆಂಬುದನ್ನು ನಾನು ಹತ್ತು ವರ್ಷಗಳ ಹಿಂದೆಯೇ ಹೇಳಿದ್ದೆ. ಉತ್ತರಕನ್ನಡ ಜಿಲ್ಲೆಯ ಪರಿಸರ ಪ್ರೇಮಿಗಳು ಹತ್ತು ವರ್ಷಗಳ ಹಿಂದೆ ಬೇಡತಿ ಜಲವಿದ್ಯುತ್ ಯೋಜನೆಗೆ ತಡೆಯೊಡ್ಡಿದ ದಿನವೇ ಈ ನಾಡಿನ ಜನರಿಗೆ ವಿಷ ಉಣ್ಣಿಸುವ ಅಣು ವಿದ್ಯುದಾಗಾರದ ಮೊಳಕೆಯೊಡೆದಿತ್ತು.

ಇಂದಿಗೆ ಎರಡು ವರ್ಷಗಳ ಹಿಂದೆ ಮೊದಲ ಬಾರಿಗೆ ಕೈಗಾ ಅಣು ವಿದ್ಯುದಾಗಾರ ಯೋಜನೆ ರೂಪುಗೊಂಡಾಗ ಉತ್ತರ ಕನ್ನಡ ಜಿಲ್ಲೆಯ ಪರಿಸರ ಪ್ರೇಮಿಗಳು ಅದನ್ನು ವಿರೋಧಿಸಿದ್ದರು. ಆಗ ನಾನು ಮುಂಗಾರುವಿನಲ್ಲಿ ಬರೆದ ಒಂದು ಲೇಖನದಲ್ಲಿ ನಿಮಗೆ ಬೇಡತಿಯ ಜಲವಿದ್ಯುತ್ ಯೋಜನೆ ಬೇಡವಾದರೆ ಕೈಗಾದ ಅಣುವಿದ್ಯುದಾಗಾರ ಅನಿವಾರ್ಯವಾಗುವುದೆಂದು ಪರಿಸರ ಪ್ರೇಮಿಗಳಿಗೆ ಹೇಳಿದ್ದೆ. ಆಗ ಅನೇಕ ಮಂದಿ ಮುಂಗಾರು ಓದುಗರು ನನಗೆ ಕೈಗಾ ಅಣುವಿದ್ಯುದಾಗಾರದ ಬೆಂಬಲಿಗನೆಂಬ ಬಿಲ್ಲೆ ಹಚ್ಚಿದ್ದರು.

ಅಂದು ನಾನು ಹೇಳಿದ್ದು ಬೇರೆಯೇ ಮಾತಾಗಿ ಅನೇಕರಿಗೆ ಅನ್ನಿಸಬಹುದು. "ನಿಮಗೆ ಬೇಡತಿ ಬೇಡವಾದರೆ ಕೈಗಾ ಅನಿವಾರ್ಯವಾಗುತ್ತದೆ." ಎನ್ನುವ ಮಾತನ್ನು ನಾನು ಮತ್ತೆ ಹೇಳಬಯಸುತ್ತೇನೆ.

ಕೈಗಾ ಅಣು ವಿದ್ಯುದಾಗಾರ ನಮಗಿಂದು ಅನಿವಾರ್ಯವಾಗುತ್ತಿರುವುದು ಈ ನಾಡಿನ ದುರಂತವೆಂಬುದನ್ನೂ ನಾನು ಮನಗಂಡಿದ್ದೇನೆ. ಈ ದುರಂತಕ್ಕೆ ಕೇವಲ ಪರಿಸರ ಪ್ರೇಮಿಗಳ ಭಾವುಕತೆ ಕಾರಣವೆಂದು ನಾನು ಹೇಳುತ್ತಿಲ್ಲ. ಇದಕ್ಕೆ ನಾಡಿನ ರಾಜಕೀಯ ಪ್ರಭುಗಳ ಹೊಣೆಗೇಡಿತನ, ವಿಚಾರವಂತರೆನ್ನುವ ಸಾರ್ವಜನಿಕರ ಅತೀವ ಅಸಡ್ಡೆ ಮತ್ತು ತಜ್ಞರೆನ್ನುವವರ ಆತ್ಮ ವಂಚನೆ ಕಾರಣ. ಇದು ಹೇಗೆ?_ಎನ್ನುವುದನ್ನು ವಿಶ್ಲೇಷಣೆಮಾಡುತ್ತಾ ಹೋದರೆ ಅದೇ ಒಂದು ಗ್ರಂಥವಾಗಬಹುದು.

ನನ್ನ ಈ ಅಂಕಣದಲ್ಲಿ ಆಡುತ್ತಿರುವ ಬೇರೆಯೇ ಮಾತಿಗೆ ಆಧಾರವೇನೆಂಬುದನ್ನು ಸಂಕ್ಷಿಪ್ತವಾಗಿ ಹೇಳಿದರೆ ಸಾಕೆಂದು ಭಾವಿಸುತ್ತೇನೆ.

ಕರ್ನಾಟಕದ ವಿದ್ಯುತ್ ಕ್ಷಾಮ ಹೊಸದಾಗಿ ತಲೆದೋರಿದ ಸಮಸ್ಯೆಯೇನಲ್ಲ. ಕಳೆದ ಹದಿನೆಂಟು ವರ್ಷಗಳಿಂದ ಕರ್ನಾಟಕದ ಆರ್ಥಿಕ ಹಿತ ವಿದ್ಯುತ್ ಕ್ಷಾಮದಿಂದ ಬಳಲಿದೆ. ವರ್ಷ ಕಳೆದಂತೆ ಕರ್ನಾಟಕ ಆರ್ಥಿಕವಾಗಿ ಬಡವಾಗುತ್ತಿದೆ. ಈ ನಾಡಿನ ಜನರ ಸರಾಸರಿ ವಾರ್ಷಿಕ ಆದಾಯ ರಾಷ್ಟ್ರೀಯ ಸರಾಸರಿಗಿಂತ ಕೆಳಗೆ ಕುಸಿದಿದೆ. ಕರ್ನಾಟಕದ ಈ ಆರ್ಥಿಕ ಕುಸಿತಕ್ಕೆ ವಿದ್ಯುತ್ ಅಭಾವವೊಂದೇ ಕಾರಣವೆಂಬುದು ಎಲ್ಲರ ಅರಿವಿನ ಸಂಗತಿ.

ಈ ಅಭಾವ ನಿವಾರಣೆಗೆ ರಾಜ್ಯದಲ್ಲಿ ಲಭ್ಯವಿರುವ ವಿದ್ಯುನ್ಮೂಲಗಳನ್ನು ಪೂರ್ಣವಾಗಿ ಬಳಸಿಕೊಳ್ಳಬೇಕೆಂಬುದು 1970ರ ದಶಕದಲ್ಲಿ ನಾಡಿನ ಸರಕಾರದ ಮುಂದಿದ್ದ ದೊಡ್ಡ ಗುರಿ. ಲಭ್ಯವಿರುವ ವಿದ್ಯುನ್ಮೂಲಗಳಾವುವು? ಈ ನಾಡಿನ ವಿದ್ಯುತ್ ಪೂರೈಕೆಗೆ ನಾವು ಯೋಚಿಸಬಹುದಾದ ವಿಸ್ತೃತ ಮೂಲವೆಂದರೆ ಜಲವಿದ್ಯುದಾಗಾರ ಹರಿವಾಣಿರೋದೇ. ಕಲ್ಲಿದ್ದಲನ್ನು ಸುಟ್ಟು ಹೀರಿದ ಉಗಿಯುಲ್ಲಿ ವಿದ್ಯುತ್ ಉತ್ಪಾದಿಸುವ ವಿಧಾನ ಕರ್ನಾಟಕಕ್ಕೆ ಹೇಳಿಸಿದ್ದಲ್ಲ. ಯಾಕೆಂದರೆ ಇಲ್ಲಿ ಕಲ್ಲಿದ್ದಲು ಇಲ್ಲ. ಉತ್ತರ ಭಾರತದಿಂದ ದೊಡ್ಡ ಪ್ರಮಾಣದಲ್ಲಿ ಕಲ್ಲಿದ್ದಲನ್ನು ತರಿಸಿ ಉಷ್ಣ ವಿದ್ಯುತ್ ಸ್ಥಾವರಗಳನ್ನು ಕಟ್ಟಿ ತಡೆ ಇಲ್ಲದ ವಿದ್ಯುತ್ ಪೂರೈಕೆ ಸಾಧ್ಯವಾಗದ ಮಾತು. ಜಲವಿದ್ಯುತ್ ಬಳಕೆ ನಮಗೆ ಬೇಡವಾದರೆ–ಕಲ್ಲಿದ್ದಲು ಮೂಲವಾದ ಉಷ್ಣವಿದ್ಯುತ್ ಸ್ಥಾವರ ಅಸಾಧ್ಯವೆಂದಾದರೆ ಈ ನಾಡಿನ ರಾಜಕೀಯ ಪ್ರಭುಗಳು ಮತ್ತು ಪ್ರಜ್ಞಾವಂತ ಜನರು ಮುಂಬಯಿ ಹೈನಿಂದ ಹೊರ ಹೊಮ್ಮುತ್ತಿರುವ ಪೆಟ್ರೋಲಿಯಂ ಗ್ಯಾಸ್‌ನ್ನು ಕೊಳವೆಗಳ ಮೂಲಕ ಕರ್ನಾಟಕಕ್ಕೆ ಸಾಗಿಸಿ ಬೃಹತ್ ಪ್ರಮಾಣದ ಗ್ಯಾಸ್ ಟರ್ಬೈನ್‌ಗಳನ್ನು ಕಟ್ಟಿ ವಿದ್ಯುತ್ ಉತ್ಪಾದನೆ ಮಾಡಬಹುದಿತ್ತು. ಇದು ಭಾರೀ ವೆಚ್ಚದ ಯೋಜನೆ. ಕಾಲವನ್ನು ಕಬಳಿಸುವ ಕಾರ್ಯಕ್ರಮವೂ ಹೌದು. ಹೀಗಾಗಿ ಮುಂಬಯಿ ಹೈನಲ್ಲಿ ಇಂದು ಬಳಕೆಮಾಡಿಕೊಳ್ಳಲಾಗದೆ ಸುಟ್ಟು ಹಾಕುತ್ತಿರುವ ಪೆಟ್ರೋಲಿಯಂ ಗ್ಯಾಸನ್ನು ಕರ್ನಾಟಕಕ್ಕೆ ತಂದು ವಿದ್ಯುತ್ ಉತ್ಪಾದನೆ ಮಾಡುವ ಯೋಚನೆಯನ್ನೇ ಮಾಡದಾಗಿದ್ದೇವೆ.

ಹಾಗಾದರೆ ಈ ನಾಡಿಗೆ ಅತೀ ಜರೂರಾಗಿ ಬೇಕಾಗಿರುವ ವಿದ್ಯುತ್ ಉತ್ಪಾದನೆಗೆ ಇರುವ ದಾರಿ ಯಾವುದು?–ಎನ್ನುವ ಪ್ರಶ್ನೆಗೆ ವಾಸ್ತವಿಕ ಉತ್ತರವಾಗಿ ಅಣುವಿದ್ಯುತ್ ಸ್ಥಾವರ ಎದ್ದು ಬರುತ್ತದೆ. ಸದ್ಯದ ಸ್ಥಿತಿಯಲ್ಲಂತೂ ಇದಕ್ಕೆ ಬೇರೆ ಉತ್ತರವಿಲ್ಲ. ಕೈಗಾದಲ್ಲಿ ಅಣು ವಿದ್ಯುದಾಗಾರ ಬೇಡವೆಂದು ಹೇಳುತ್ತಿರುವ ಪರಿಸರ ಪ್ರೇಮಿಗಳು ಕರ್ನಾಟಕದ ನಿಸರ್ಗದತ್ತವಾದ ಜಲವಿದ್ಯುನ್ಮೂಲಗಳ ಬಳಕೆಯನ್ನೂ ವಿರೋಧಿಸುವವರಾದ್ದರಿಂದ ಪ್ರಶ್ನೆ ಇನ್ನಷ್ಟು ಜಟಿಲವಾಗುತ್ತದೆ. ಈ ಪರಿಸರ ಪ್ರೇಮಿಗಳು ಹೇಳುತ್ತಿರುವಂತೆ ಸಮುದ್ರದ ಅಲೆಗಳಿಂದ-ಉರಿಯುವ ಬಿಸಿಲಿನಿಂದ ಬೃಹತ್ ಪ್ರಮಾಣದ ವಿದ್ಯುತ್ ಉತ್ಪಾದನೆ ಮಾಡುವ ತಂತ್ರಜ್ಞಾನ ರೂಪುಗೊಳ್ಳಲು ಇನ್ನೂ ಕಾಲು ಶತಮಾನ ಬೇಕಾಗಬಹುದು.

ಇವೆಲ್ಲ ನಮ್ಮ ಮುಂದೀಗ ಇರುವ ವಾಸ್ತವಗಳು. ಈ ದೃಷ್ಟಿಯಿಂದ ಕೈಗಾ ಅಣುವಿದ್ಯುದಾಗಾರ ಬೇಡವೆಂದು ಹೇಳುತ್ತಿರುವ ಪರಿಸರ ಪ್ರೇಮಿಗಳು ಅಣು ವಿದ್ಯುತ್ತಿಗಿರುವ ಬದಲಿ ಮೂಲ ಯಾವುದೆಂಬುದನ್ನು ತೋರಿಸಿ ಕೊಡಲೇ ಬೇಕಾಗುತ್ತದೆ. ಇಲ್ಲವಾದರೆ ಅವರ ವಿರೋಧಕ್ಕೆ ಬಲ ಬರುವುದಿಲ್ಲ.

ಈ ನಾಡನ್ನು ಆಳುತ್ತಿರುವ ರಾಜಕೀಯ ಪ್ರಭುಗಳಿಗೆ ರಾಜ್ಯದ ಹಿತದ ಕಲ್ಪನೆ ಇದ್ದಿದ್ದರೆ–ಪ್ರಜ್ಞಾವಂತ ಪ್ರಜೆಗಳಿಗೆ ಜನರ ಆರ್ಥಿಕ ಹಿತದ ಯೋಚನೆ ಇದ್ದಿದ್ದರೆ ಜಲವಿದ್ಯುನ್ಮೂಲಗಳನ್ನು ಹೀಗೆ ಕಡೆಗಣಿಸುವ ಪ್ರಮಾದವಾಗುತ್ತಿರಲಿಲ್ಲ.

ಈ ದೇಶದ ಇತರ ರಾಜ್ಯಗಳಿಗೆ ಹೋಲಿಸಿದರೆ ಹಿಮಾಚಲ ಪ್ರದೇಶವೊಂದನ್ನು ಬಿಟ್ಟರೆ ಕರ್ನಾಟಕದಲ್ಲಿರುವಷ್ಟು ಜಲವಿದ್ಯುನ್ಮೂಲಗಳು ಇನ್ನೆಲ್ಲಿಯೂ ಇಲ್ಲ. 1979ರ ವರೆಗೆ ಕರ್ನಾಟಕವು ಜಲವಿದ್ಯುನ್ಮೂಲಗಳನ್ನು ಯೋಜಿತವಾಗಿ ಬಳಸಿಕೊಳ್ಳಬೇಕೆಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದರು. ಕರ್ನಾಟಕದ ವಿದ್ಯುತ್ ನಿಗಮವು ಕರ್ನಾಟಕದ ಪಶ್ಚಿಮ ಘಟ್ಟಗಳಿಂದ ಪಶ್ಚಿಮಕ್ಕೆ ಧುಮುಕುವ ಎಲ್ಲ ನದಿಗಳನ್ನು ಬಳಸಿ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆಗಳನ್ನು ತಯಾರಿಸಿತ್ತು. ಯೋಜನಾ ಆಯೋಗವೂ ಇವುಗಳಿಗೆ ಒಪ್ಪಿಗೆ ನೀಡಿತ್ತು.

1979ರಲ್ಲಿ ಜಲವಿದ್ಯುತ್ ಯೋಜನೆಗಳಿಗೆ ತಿರೋಧ ಕೈಗೊಳ್ಳಲು ಕಂಗೆಯದ ಹಿನ್ನೆಲೆ ಹೋಗುವುದರ ಮೊದಲು ಜಲವಿದ್ಯುನ್ಮೂಲಗಳು ಮತ್ತು ಇತರ ಮೂಲಗಳ ಸಾಧಕ-ಬಾಧಕಗಳನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸಬಯಸುತ್ತೇನೆ. 1977ರಲ್ಲಿ ಕರ್ನಾಟಕದ ವಿದ್ಯುತ್ ನಿಗಮವು ಬಿಡಿಸಿದ್ದ ಸಮಗ್ರ ಜಲವಿದ್ಯುತ್ ಯೋಜನೆಗಳ ರೂಪರೇಷೆಯ ಮೇರೆಗೆ ಕರ್ನಾಟಕದಲ್ಲಿ ಶರಾವತಿ ಮತ್ತು ಕಾಳೀನದಿ ಯೋಜನೆಗಳನ್ನು ಬಿಟ್ಟು ಸುಮಾರು 6,000 ಮೆಗಾವಾಟ್‌ನಷ್ಟು ವಿದ್ಯುತ್ ಉತ್ಪಾದನೆ ಮಾಡಬಲ್ಲ ಜಲವಿದ್ಯುನ್ಮೂಲಗಳಿವೆ. ಆರ್ಥಿಕ ದೃಷ್ಟಿಯಿಂದಲೂ ಜಲವಿದ್ಯುತ್ ಎಲ್ಲ ಕಾಲಕ್ಕೂ ತೀರಾ ಅಗ್ಗವಾಗಿ ದೊರಕಬಲ್ಲುದು. ಬೇರೆ ವಿದ್ಯುನ್ಮೂಲಗಳಲ್ಲಾದರೆ ವರ್ಷ ಕಳೆದಂತೆ ಉತ್ಪಾದನಾ ವೆಚ್ಚ ಹೆಚ್ಚುತ್ತಾ ಹೋಗುತ್ತದೆ. ಜಲವಿದ್ಯುನ್ಮೂಲಗಳಲ್ಲಿ ವರ್ಷ ಸಂದಂತೆ ವೆಚ್ಚ ಕಡಿಮೆಯಾಗುತ್ತಾ ಹೋಗುತ್ತದೆ.

ಅಣುವಿದ್ಯುತ್ ಅಥವಾ ಉಷ್ಣವಿದ್ಯುತ್ ಸ್ಥಾವರಗಳಲ್ಲಿ ವಿದ್ಯುದುತ್ಪಾದನೆ ಶೇಕಡಾ 25ರಷ್ಟೂ ಅವಲಂಬನೀಯವಲ್ಲ. ಒಂದು ಸಣ್ಣ ತಾಂತ್ರಿಕ ದೋಷ ಇವುಗಳನ್ನು ಪೂರ್ಣವಾಗಿ ಸ್ಥಗಿತಗೊಳಿಸಬಲ್ಲುದು. ಇವುಗಳ ಕಾರ್ಯ ನಿರ್ವಹಣೆಯ ಅವಧಿಯೂ ಕೂಡಾ ಬಹಳ ಕಡಿಮೆ. ಇವುಗಳು ಹೆಚ್ಚೆಂದರೆ 25ವರ್ಷಗಳ ಕಾಲ ಕೆಲಸ ಮಾಡಬಲ್ಲವು.

ಜಲವಿದ್ಯುತ್ ಮೂಲಗಳಲ್ಲಿ ತೀರಾ ಪ್ರತಿಕೂಲವಾದ ನೈಸರ್ಗಿಕ ಪರಿಸ್ಥಿತಿಯಲ್ಲೂ ಕನಿಷ್ಠ ಪಕ್ಷ ಶೇಕಡಾ 50ರಷ್ಟಾದರೂ ವಿದ್ಯುತ್ ಉತ್ಪಾದನೆ ಮಾಡಲು ಸಾಧ್ಯ. ಕಾರ್ಯನಿರ್ವಹಣೆಯ ಅವಧಿಯೂ ಕೂಡಾ ದೀರ್ಘ ಕಾಲೀನ. ಜಲವಿದ್ಯುದಾಗಾರಗಳ ಕೆಲಸ ಅದೆಷ್ಟೇ ಕಳಪೆಯದಾದರೂ ಅವುಗಳು 50ರಿಂದ 75 ವರ್ಷಗಳ ಕಾಲ ಕನಿಷ್ಠ ವಿದ್ಯುತ್ ಉತ್ಪಾದನೆ ಮಾಡಬಲ್ಲವು.

ವಿದ್ಯುತ್ ಉತ್ಪಾದನಾ ವೆಚ್ಚದ ವಿಚಾರದಲ್ಲೂ ಬಳಕೆದಾರ ಸಾರ್ವಜನಿಕರು ಗಮನಿಸಬೇಕಾದ ಒಂದು ಮುಖ್ಯಾಂಶವಿದೆ. 1972ರಲ್ಲಿ ಕಾಳೀ ನದಿಯೋಜನೆಯ ಕೆಲಸ ಆರಂಭವಾದಾಗ ಅದರ ಉತ್ಪಾದನಾ ವೆಚ್ಚವನ್ನು ಯೂನಿಟ್‌ಗೆ 8ಪೈಸೆಯೆಂದು ಅಂದಾಜು ಮಾಡಲಾಗಿತ್ತು. ಆದರೆ 1983ರಲ್ಲಿ ಅದು ಒಂದು ಇತಿ-ಮಿತಿಯಲ್ಲಿ ವಿದ್ಯುತ್ ಉತ್ಪಾದನೆ ಆರಂಭಿಸಿದಾಗ ಉತ್ಪಾದನಾ ವೆಚ್ಚ ಯೂನಿಟ್‌ಗೆ 12 ಪೈಸೆಗಳಿಗೇರಿತೆಂದು ಹೇಳಲಾಗಿದೆ.

ಅದೇ ದಶಕದಲ್ಲಿ ಕೆಲಸ ಆರಂಭಿಸಲಾದ ರಾಯಚೂರು ಉಷ್ಣವಿದ್ಯುತ್ ಸ್ಥಾವರವನ್ನು ಗಣನೆಗೆ ತೆಗೆದುಕೊಳ್ಳೋಣ. 1980ರಲ್ಲಿ ಇದರ ಕೆಲಸ ಆರಂಭವಾದಾಗ ಉತ್ಪಾದನಾ ವೆಚ್ಚ ಯೂನಿಟ್‌ಗೆ 35 ಪೈಸೆಯೆಂದು ಅಂದಾಜು ಮಾಡಲಾಗಿತ್ತು. 1985ರಲ್ಲಿ ಇದು ಕಾರ್ಯಾರಂಭ ಮಾಡಿದಾಗ ಉತ್ಪಾದನಾ ವೆಚ್ಚ ಯೂನಿಟ್‌ಗೆ 35 ಪೈಸೆ ಎಂದು ಅಂದಾಜು ಮಾಡಲಾಗಿತ್ತು. 1985ರಲ್ಲಿ ಇದು ಕಾರ್ಯಾರಂಭ ಮಾಡಿದಾಗ ಉತ್ಪಾದನಾ ವೆಚ್ಚ ಯೂನಿಟ್‌ಗೆ ರೂ. 1ನ್ನು ದಾಟಿತ್ತು. ಮುಂದಿನ ದಿನಗಳಲ್ಲಿ ಈ ವೆಚ್ಚ ವರ್ಷಕ್ಕೆ ಶೇಕಡಾ 10 ರಿಂದ 15ರಷ್ಟು ಹೆಚ್ಚುತ್ತಾ ಹೋಗುತ್ತದೆ. ಕಾಳಿ ಜಲ ವಿದ್ಯುತ್ ಯೋಜನೆಯದಾದರೆ ಉತ್ಪಾದನಾ ವೆಚ್ಚ ಈಗಿರುವ 12 ಪೈಸೆಯಿಂದ ಕನಿಷ್ಠ ಪಕ್ಷ ಶೇಕಡಾ 10 ರಷ್ಟು ಕಡಿಮೆಯಾಗುತ್ತಾ ಹೋಗುತ್ತದೆ.

ಉತ್ಪಾದನಾ ವೆಚ್ಚಕ್ಕೂ ಬಳಕೆದಾರರ ವಿದ್ಯುತ್ ಬಿಲ್ಲಿಗೂ ನೇರ ಸಂಬಂಧವಿದೆ. ಕರ್ನಾಟಕದಲ್ಲಿ ಈಗ ಬಳಕೆಗೆ ಸಿಗುತ್ತಿರುವ ಶರಾವತಿ ವಿದ್ಯುತ್‌ನ ಉತ್ಪಾದನಾ ವೆಚ್ಚ ಯೂನಿಟ್‌ಗೆ 2 ಪೈಸೆಗಿಂತಲೂ ತುಸು ಕಡಿಮೆ. ಕಾಳೀನದಿ ಯೋಜನೆಯ ವಿದ್ಯುತ್ ಉತ್ಪಾದನಾವೆಚ್ಚ ಯೂನಿಟ್‌ಗೆ 12ಪೈಸೆ. ಈ ವಿದ್ಯುತ್ ನನ್ನ ಮನೆ ಮತ್ತು ಕಾರ್ಖಾನೆಗಳನ್ನು ಸೇರಿದಾಗ ವಿದ್ಯುತ್‌ದರ ಯೂನಿಟ್‌ಗೆ 65 ಪೈಸೆಯಿಂದ ರೂ. 1-25 ಆಗುತ್ತಿದೆ. ಮುಂದಿನ ದಿನಗಳಲ್ಲಿ ನಾವು ಉಷ್ಣ ವಿದ್ಯುತ್ ಅಥವಾ ಅಣು ವಿದ್ಯುತ್ ಸ್ಥಾವರಗಳನ್ನೇ ಅವಲಂಬಿಸಿದರೆ ವಿದ್ಯುತ್ ಬಿಲ್‌ನ ಗಾತ್ರ ಎಷ್ಟಾಗಬಹುದೆಂಬುದನ್ನು ಗ್ರಾಹಕರು ಗಂಭೀರವಾಗಿ ಯೋಚಿಸಬೇಕಾಗಿದೆ.

ನಮ್ಮ ಈ ರಾಜ್ಯದಲ್ಲಿ ಜಲ ವಿದ್ಯುನ್ಮೂಲಗಳು ಸಾಕಷ್ಟಿವೆ ಮತ್ತು ಈ ಮೂಲದ ವಿದ್ಯುತ್ ತೀರಾ ಕಡಿಮೆ ವೆಚ್ಚದಲ್ಲಿ ಲಭ್ಯವಾಗಲಿದೆ. ಆದರೂ ನಾವಿಂದು ಜಲ ವಿದ್ಯುನ್ಮೂಲಗಳನ್ನು ಬದಿಗೊತ್ತಿದ್ದೇವೆ. ಯಾಕೆ?

ಇದಕ್ಕೆ ತೋರಿಕೆಗೆ ಬಂದಿರುವ ಮುಖ್ಯ ಕಾರಣವೆಂದರೆ ಪರಿಸರ ಪ್ರೇಮಿಗಳ ವಿರೋಧ. ಪಶ್ಚಿಮ ಘಟ್ಟಗಳ ಉದ್ದಕ್ಕೂ ಜಲ ವಿದ್ಯುದಾಗಾರಗಳನ್ನು ನಿರ್ಮಿಸಿದರೆ ನಮ್ಮ ವನ ಸಂಪತ್ತು ನಾಶವಾಗಿ ನೈಸರ್ಗಿಕ ಅಸಮತೋಲನವುಂಟಾಗುವುದೆಂಬುದು ಪರಿಸರ ಪ್ರೇಮಿಗಳು ಎತ್ತಿದ ಆಕ್ಷೇಪ.

ಇದೆಷ್ಟು ನಿಜವೆಂಬುದನ್ನು ತುಸು ಯೋಚಿಸೋಣ. ಕರ್ನಾಟಕದ ವಿದ್ಯುತ್ ನಿಗಮವು ತಯಾರಿಸಿದ ಎಲ್ಲ ಜಲ ವಿದ್ಯುದಾಗಾರಗಳನ್ನೂ ನಿರ್ಮಿಸಿದರೆ ಅವುಗಳಲ್ಲಿ ಮುಳುಗಡೆಯಾಗುವ ಒಟ್ಟು ಅರಣ್ಯದ ವಿಸ್ತೀರ್ಣ ಒಂದು ಲಕ್ಷ ಎಕರೆಯೆಂಬುದು ಅಂದಾಜು. ಅಂದರೆ ರಾಜ್ಯದಲ್ಲೀಗ ಇರುವ ಒಂದು ಕೋಟಿ ಅಥವಾ 100 ಲಕ್ಷ ಎಕರೆಯಷ್ಟು ಅರಣ್ಯ ಪ್ರದೇಶದ ಶೇಕಡಾ 1 ರಷ್ಟು ಭಾಗ ಮುಳುಗಡೆಯಾಗುತ್ತದೆ. ಒಟ್ಟು ಅರಣ್ಯ ಪ್ರದೇಶದ ಶೇಕಡಾ ಒಂದರಷ್ಟು ಭಾಗ ಮುಳುಗಡೆಯಾಗುವುದರಿಂದ ನೈಸರ್ಗಿಕ ಅಸಮತೋಲನವುಂಟಾಗುವುದೆಂಬ ವಾದ ವೈಜ್ಞಾನಿಕವಾದುದಲ್ಲ. ಯಾವ ಪ್ರದೇಶದಲ್ಲಾದರೂ ನಿರ್ಮಾಣವಾಗುವ ಕೃತಕ ಜಲಾಶಯ ನಿಸರ್ಗ ನಿಯಮಕ್ಕೆ ಪೋಷಕವಾಗಬಲ್ಲುದೇ ಹೊರತು ಮಾರಕವಾಗಲು ಸಾಧ್ಯವಿಲ್ಲ.

ನಮ್ಮಲ್ಲೀಗ ನಾಶವಾಗುತ್ತಿರುವ ಅರಣ್ಯವನ್ನು ರಕ್ಷಿಸಬೇಕೆಂಬ ಮಾತಿನಲ್ಲಿ ಅರ್ಥವಿದೆ. ಅದಕ್ಕೆ ಬೇರೆ ದಾರಿಗಳಿವೆ. ಉರುವಲು ಮತ್ತು ಅರಣ್ಯ ಕೈಗಾರಿಕೆಗಳಿಗಾಗಿ ಕರ್ನಾಟಕದಲ್ಲೀಗ ಪ್ರತಿವರ್ಷ 50,000 ಎಕರೆ ಪ್ರದೇಶದಲ್ಲಿ ಅರಣ್ಯ ನಾಶವಾಗುತ್ತಿದೆ. ಇದಕ್ಕೆ ಸಾರ್ವಜನಿಕರು ಮತ್ತು ಸರಕಾರ ಹೊಣೆ. ಪರಿಸರ ಪ್ರೇಮಿಗಳು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಿ ಅರಣ್ಯ ನಾಶವನ್ನು ತಡೆಗಟ್ಟಲು ಸಾಧ್ಯ. ಅದನ್ನು ಬಿಟ್ಟು ನಾಡಿನ ಜನರ ಜೀವನಕ್ಕೆ ಚಾಲನೆ ನೀಡಬಲ್ಲ ಜಲ ವಿದ್ಯುತ್ ಯೋಜನೆಗಳನ್ನು ತಡೆಗಟ್ಟುವುದರ ಮೂಲಕ ಪರಿಸರ ಪ್ರೇಮಿಗಳು ನಾಡಿಗೆ ಉಪಕಾರ ಮಾಡುತ್ತಿಲ್ಲ.

ಇಂದು ಕೈಗಾದಲ್ಲಿ ಅಣು ವಿದ್ಯುತ್ ಸ್ಥಾವರ ಬೇಡವೆನ್ನುತ್ತಿರುವವರೇ 1979ರಲ್ಲಿ ಬೇಡತಿ ಜಲ ವಿದ್ಯುತ್ ಯೋಜನೆ ಬೇಡವೆಂದು ಸತ್ಯಾಗ್ರಹ ಮಾಡಿದವರು. ನಾಡಿಗೆ ಉಪಕಾರಿಯಾಗಬಲ್ಲಬೇಡತಿ ನಿಮಗೆ ಬೇಡವಾದರೆ ಭವಿಷ್ಯ ಪೀಳಿಗೆಗೆ ವಿಷ ಉಣ್ಣಿಸಬಲ್ಲ ಅಣು ವಿದ್ಯುತ್‌ಸ್ಥಾವರ ಅನಿವಾರ್ಯವಾಗುತ್ತದೆ.

ಕೈಗಾ ಬೇಡವೆಂದರೆ ಸಾಲದು, ವಿದ್ಯುತ್ ಉತ್ಪಾದನೆಗಿರುವ ಬೇರೆ ದಾರಿ ಯಾವುದೆಂಬುದನ್ನು ತೋರಿಸಬೇಕು. ಇದು ಪ್ರಜ್ಞಾವಂತ ಪ್ರಜೆಗಳ ಹೊಣೆ ಕೂಡಾ.